ಶ್ರೀ ಬಿ. ಎಂ. ಹೊರಕೇರಿ.—ವಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಅಲ್ಪ ಮತ್ತು ಅಕಾಲಿಕ ಹಾಗೂ ಅನಿಶ್ಚಿತ ಮಳೆಗಳಿಂದ ಬೆಳೆಗಳು ಹೋಗುತ್ತಿದ್ದು, ಈ ಕಡೆ ಕೋಟ್ಯಾಂತರ ರೂಪಾಯಿಗಳ ಪರಿಹಾರ ಕೊಡುವ ಬದಲು ಇಂಥ ಯೋಜನೆಗಳನ್ನು ಕಾರ್ಯಗತ ಮಾಡಿದರೆ ಒಳ್ಳೆಯದಲ್ಲವೇ ?

ಶ್ರೀ ಎಸ್. ಬಿ ನಾಗರಾಳ್.—ನೂಕ್ತವಾದ ನಲಹೆ, ಇನ್‌ವೆಸ್ಟಿಗೇಷನ್ ಆದ ಮೇರೆ ಸರ್ಕಾರ ಇದರ ಬಗ್ಗೆ ಯೋಚನೆ ಮಾಡುತ್ತದೆ.

Taluk and District Level Food Committees.

384. SRI DAMODAR MULKY (Mudabidri).—Will the Minister for Food and Civil Supplies be pleased to state:—

(a) when the District and Taluk Lovel Food Committees in South Kanara District, were last re-constituted.

(b) when the last meeting of these committees was held (the dates of the district and taluk meetings may be given separately) ?

SMT. E. E. VAZ.—Minister for Food and Civil Supplies

(a) The District Level Food Advisory Committee and the Taluk Level Food Advisory Committees of South Kanara District were last re-constituted in the year 1973.

(b) District Level Food and Civil Supplies Advisory Committee Meeting—12th June 1974.

Taluk Level Food and Civil Supplies Advisory Committee Meeting;—

(1) Bantwal Taluk—6th February 1974.
(2) Belthangady Taluk—15th March 1974.
(3) Puttur Taluk—23rd February 1974.
(4) Sullia Taluk—29th March 1974.
(5) Udipi Taluk—19th August 1973.
(6) Coondapur Taluk—18th May 1974.
(7) Karkala Taluk—29th November 1974.
(8) Mangalore Taluk—29th June 1974.

SRI DAMODAR MULKY.—May I know whether the old Committees Constituted in 1973 are still in existence and if not so, why this Committee is not re-constituted afterwards ?

†ಶ್ರೀಮತಿ ಇ. ಇ. ವಾಜ್.—20 ಅಂಶಗಳ ಕಾರ್ಯಕ್ರಮದಲ್ಲಿ ಆಹಾರ ನಿತ್ಯೋಪಯೋಗಿ ಪದಾರ್ಥಗಳ ವಿತರಣೆಯನ್ನು ಅಳವಡಿಸಿಕೊಳ್ಳಲಾಗಿದೆ. ಅದರ ನಲುವಾಗಿಯೇ ಸಮನ್ವಯ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳಲ್ಲಿ ಶಾಸಕರು ಮತ್ತು ಸಂಸತ್ ಸದಸ್ಯರು ಇದ್ದಾರೆ ಇದಕ್ಕಾಗಿ ಒಂದು ಪ್ರತ್ಯೇಕ ಸಮಿತಿಯನ್ನು ನೇಮಕ ಮಾಡಬೇಕೆನ್ನುವ ಆಲೋಚನೆ ಸರ್ಕಾರಕ್ಕೆ ಇದೆ.

SRI DAMODAR MULKY.—The Co-ordination Committees were constituted very recently. But these Food Committees were last reconstituted in the year 1975. There is a gap of nearly 2 years May I know the reasons ?

SMT. E. E. VAZ.—There is no gap of 2 years. In different Districts some committees were constituted at different times. The Government had to see when the time of the Committees expired so that they could be re-constituted at the same time.

ಶ್ರೀ ಎಂ. ಬಿ. ರಾಮಸ್ವಾಮಿ.—ತಾವು ಫುಡ್ ಅಡ್ವೈಸರಿ ಕಮಿಟಿಗಳನ್ನು ನಿಲ್ಲಿಸಿದ್ದೇವೆ ಎಂದು ಹೇಳಿದಿರಿ, 20 ಅಂಶಗಳ ಕಾರ್ಯಕ್ರಮದಂತೆ ಆಹಾರ ಪದಾರ್ಥಗಳ ವಿತರಣೆಯು ಕೆಲಸ ನಡೆಯುತ್ತಿಲ್ಲ. ಆಹಾರ ಪದಾರ್ಥಗಳ ಸರಿಯಾದ ವಿತರಣೆಗಾಗಿ ಈ ಕಮಿಟಿಗಳನ್ನು ಮತ್ತೆ ರೀ ಕಾನ್‌ಸ್ಟಿಟ್ಯೂಟ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ವಿತರಣೆಯ ಬಗ್ಗೆ ಅಗತ್ಯ ಬದ್ದಲ್ಲಿ, ಬೆಂಗಳೂರು ಕಾರ್ಪೊರೇಷನ್ ಏರಿಯಾದಲ್ಲ ಪುನ: ರೀಕಾನ್‌ಸ್ಟಿಟ್ಯೂಟ್ ಮಾಡುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆ.

SRI N. G. HALAPPA.—is it the sweet will and pleasure of the Tahasildar to see to their working ? I know the Committees were not functioning properly though they were re-constituted. Would you take action on such erring officers ?

SMT. E. E. VAZ.—We will look into it.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರು ನಗರ ಕಾರ್ಪೊರೇಷನ್ ಏರಿಯಾದಲ್ಲಿ ಫುಡ್ ಅಡ್ವೈಸರಿ ಕಮಿಟಿಗಳನ್ನು ರೀ ಕಾನ್‌ಸ್ಟಿಟ್ಯೂಟ್ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆಂದು ಹೇಳಿದಿರಿ, ಯಾವಾಗ ಮಾಡಲಿಕ್ಕೆ ಆಗುತ್ತದೆಂದೂ ಮತ್ತು ಅದೇ ರೀತಿ ಬೇರೆ ಏರಿಯಾದಲ್ಲೂ ಮಾಡುವುದಕ್ಕೆ ಆಗುತ್ತದೆಯೇ ಎಂದು ಸ್ಪಷ್ಟವಾಗಿ ಹೇಳುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಆದಷ್ಟು ಜಾಗ್ರತೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಆದರೆ ಇಂತಿಷ್ಟು ಏರಿಯಾದಲ್ಲ ಮಾಡಬೇಕೆಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಸರ್ಕಾರದಿಂದ ಆಹಾರದ ವಿತರಣೆ ಬಗ್ಗೆ ಸಮಿತಿಗಳನ್ನು ನೇಮಕ ಮಾಡಿದ್ದು ನಿಜ. ಆದರೆ ಇಡೀ ದೇಶಾದ್ಯಂತ ಇದಕ್ಕೆ ಸಂಬಂಧಪಟ್ಟ ಹಾಗೆ ಸಮಿತಿಗಳು ಏನು ಇವೆ ಅದರಲ್ಲಿ ಕೆಲವು ಕಡೆಗಳಲ್ಲಿ ಏನು ಮಾಡುತ್ತಾರೆ ಎಂದರೆ ಮಾನ್ಯ ಸದಸ್ಯರೊಬ್ಬರು ಹೇಳಿದ ಹಾಗೆ ಸಂಬಂಧಪಟ್ಟ ತಾಸೀಲ್ದಾರರು ಮತ್ತು ಅಧಿಕಾರಿಗಳು ಅವರವರ ಮರ್ಜಿ ನೋಡಿಕೊಂಡು ಈ ಆಹಾರ ವಿತರಣೆ ಮಾಡುವುದಾದರೆ ಆವಾಗ ಏನು ಮಾಡುತ್ತೀರಿ ? ಆದುದರಿಂದ ಆ ಬಗ್ಗೆ ಒಂದು ಪ್ರತ್ಯೇಕ ಸಮಿತಿಗಳು ಆಯಾಯ ಜಿಲ್ಲೆಯಲ್ಲೂ ಮತ್ತು ಆಯಾಯಾ ತಾಲ್ಲೂಕುಗಳಲ್ಲೂ ಇದ್ದರೆ ಉತ್ತಮವಲ್ಲವೇ ? ಈ ಬಗ್ಗೆ ಸರ್ಕಾರ ಪುನರ್ವಿಮರ್ಶೆ ಮಾಡಿ ಈ 20 ಅಂಶದ ಕಾರ್ಯಕ್ರಮದ ಜೊತೆಗೆ ಇದಕ್ಕೆ ಒಂದು ಪ್ರತ್ಯೇಕ ಸಮಿತಿಯನ್ನು ಮಾಡುವುದು ಸೂಕ್ತವಲ್ಲವೇ ?

ಶ್ರೀಮತಿ ಇ.ಇ. ವಾಜ್.—ಈ 20 ಅಂಶದಲ್ಲಿ ಆಹಾರದ ವಿತರಣೆಯೂ ಕೂಡ ಸೇರಿದೆ. ಈ ಕೋಆರ್ಡಿನೇಷನ್ ಕಮಿಟಿಗೆ ಇದನ್ನು ಪರಿಶೀಲಿಸುವ ಅಧಿಕಾರವೂ ಇದೆ. ಇದಕ್ಕೆ ಪ್ರತ್ಯೇಕವಾದ ಸಮಿತಿಗಳನ್ನು ಮಾಡಬೇಕಾಗುವುದೇ ಎಂದು ಕಂಡುಬಂದಲ್ಲಿ ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.